

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **15–10–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್‌ರತ್ ಉಮರ್(ರ)ರ ಶಹಾದತಿಗೆ ಸಂಬಂಧಿಸಿ ಸಹೀಹ್ ಬುಖಾರಿಯಲ್ಲಿ ವಿವರಿಸಲಾದ ವರದಿಯಿಂದ ತಿಳಿದು ಬರುವುದೇನೆಂದರೆ, ಹಝ್‌ರತ್ ಉಮರ್(ರ) ಮೇಲೆ ಹಲ್ಲೆ ನಡೆಸಲಾದಾಗ ಫಜ್ರ್ ನಮಾಝನ್ನು ನಿರ್ವಹಿಸಿ ಮುಕ್ತಾಯ ಗೊಳಿಸಲಾಯಿತು. ಆದರೆ ಬೇರೊಂದು ವರದಿಯ ಪ್ರಕಾರ ಹಝ್‌ರತ್ ಇಬ್ನು ಅಬ್ಬಾಸ್(ರ) ಹೇಳುತ್ತಾರೆ: ಹಝ್‌ರತ್ ಉಮರ್(ರ)ರ ದೇಹದಿಂದ ರಕ್ತ ಬಹಳವಾಗಿ ಸುರಿಯಲು ತೊಡಗಿದ ಕಾರಣದಿಂದ ಅವರು ಪ್ರಜ್ಞಾಹೀನರಾದರು. ಆಗ ನಾನು ಅವರನ್ನು ಜನರ ಸಹಾಯದಿಂದ ಎತ್ತಿ ಮನೆಗೆ ತಲುಪಿಸಿದೆ. ಮುಂಜಾನೆ ಸಮಯದಲ್ಲಿ ಅವರಿಗೆ ಪ್ರಜ್ಞೆ ಬಂದಾಗ, ಜನರು ನಮಾಝ್ ನಿರ್ವಹಿಸಿ ಆಯಿತೆಂದು ಅವರ ಪ್ರಶ್ನೆಗೆ ಉತ್ತರವಾಗಿ ಹೇಳಲಾಯಿತು. ಆಗ ಅವರು ಹೇಳಿದರು: ನಮಾಝನ್ನು ಉಪೇಕ್ಷಿಸುವವನ ಒಳಗೆ ಯಾವುದೇ ಇಸ್ಲಾಂ ಇಲ್ಲ. ಅನಂತರ ಅವರು ವುಝೂ ಮಾಡಿ ನಮಾಝ್ ನಿರ್ವಹಿಸಿದರು. ತಬ್‌ಕಾತುಲ್ ಖುಬ್ರದಲ್ಲೂ ಹೀಗೆಯೇ ಬರೆಯಲಾಗಿದೆ. ಹಝ್‌ರತ್ ಉಮರ್(ರ)ರನ್ನು ಮನೆಗೆ ತಲುಪಿಸಲಾದ ನಂತರ ಹಝ್‌ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ನಮಾಝಿಗೆ ಇಮಾಮತ್ ವಹಿಸಿದರು. ಎರಡು ಸಣ್ಣ ಸೂರತ್ತುಗಳನ್ನು ಪಾರಾಯಣ ಮಾಡಿದ್ದಾಗಿ ಪ್ರಸ್ತಾಪಿಸಲಾಗಿದೆ.

ತಬ್ಕಾತುಲ್ ಕುಬ್ರದಲ್ಲಿ ಹೀಗೆ ಬರೆಯಲಾಗಿದೆ: ಹಝ್‌ರತ್ ಉಮರ್(ರ)ರ ಮೇಲೆ ಚೂರಿ ಚಲಾಯಿಸಿದ ವ್ಯಕ್ತಿ ಯಾರೆಂದು ಹಝ್‌ರತ್ ಅಬ್ದುಲ್ಲಾಹ್ ಬಿನ್ ಅಬ್ಬಾಸ್ ಜನರೊಡನೆ ಕೇಳಿದರು. ಮುಗ್ಯೆರ ಬಿನ್ ಶೂಬನ ಗುಲಾಮನಾದ ಅಬೂಲುಅ್‌ಲುಅನ ಹೆಸರನ್ನು ಜನರು ಹೇಳಿದರು. ಅವನನ್ನು ಹಿಡಿಯಲಾದಾಗ ಅವನು ಅದೇ ಚೂರಿಯಿಂದ ಆತ್ಮಹತ್ಯೆ ಮಾಡಿದನು. ಅಬೂಲುಅ್‌ಲುಅ ತನ್ನ ತಾತ್ಕಾಲಿಕ ಆವೇಶ ಮತ್ತು ಕೋಪದ ಕಾರಣದಿಂದ ಹಝ್‌ರತ್ ಉಮರ್(ರ)ರನ್ನು ಶಹೀದ್ ಮಾಡಿದ್ದನು ಎಂದು ಚರಿತ್ರೆಗಾರರ ಹೇಳಿಕೆಗಳಿಂದ ತಿಳಿದುಬರುತ್ತದೆ. ಹಝ್‌ರತ್ ಉಮರ್(ರ)ರ ಕೊಲೆಯಲ್ಲಿ ಹುರ್‌ಮಝಾನ್ ಮತ್ತು ಜುಫೈನನ ಕೈವಾಡವಿತ್ತು ಎಂದು ಜೀವನಚರಿತ್ರೆ ಮತ್ತು ಚರಿತ್ರೆಯ ಮುಖ್ಯ ಗ್ರಂಥವಾದ ಕಿತಾಬುಲ್ ಬದಾಯ ವ ನಿಹಾಯದಲ್ಲಿ ಸಂಶಯ ಪ್ರಕಟಿಸಲಾದ ಕಾರಣದಿಂದ ಇದು ಒಂದು ಸಂಚಾಗಿತ್ತು ಮತ್ತು ಮೊದಲೇ ಸರಿಯಾಗಿ ತೀರ್ಮಾನಿಸಲಾದ ಯೋಜನೆಯ ಪ್ರಕಾರ ಹಝ್‌ರತ್ ಉಮರ್(ರ)ರನ್ನು ಕೊಲೆ ಮಾಡಲಾಗಿತ್ತು ಎಂದು ನಂತರದ ಚರಿತ್ರೆಗಾರರು ಹೇಳುತ್ತಾರೆ. ಮುಸ್ಲಿಮನಾಗಿ ಮದೀನದಲ್ಲಿ ನೆಲೆಸಿದ್ದ ಇರಾನಿನ ಸೇನಾಧಿಪತಿ ಹುರ್‌ಮಝಾನ್ ಈ ಸಂಚಿನಲ್ಲಿ ಭಾಗಿಯಾಗಿದ್ದನು ಎಂದು ಅವರು ಭಾವಿಸುತ್ತಾರೆ.

ಮುಹಮ್ಮದ್ ರಝಾ ಸಾಹಿಬ್ ತನ್ನ ಪುಸ್ತಕವಾದ ಸೀರತ್ ಉಮರ್ ಫಾರೂಖ್‌ನಲ್ಲಿ ಬರೆಯುತ್ತಾರೆ: ಕೂಫದ ಅಧಿಕಾರಿಯಾದ ಹಝ್‌ರತ್ ಮುಗ್ಯೆರ ಬಿನ್ ಶೂಬರ ಶಿಫಾರಸ್ಸಿನ ಮೇರೆಗೆ ಅವರ ಒಬ್ಬ ನಿಪುಣ ಗುಲಾಮನಾದ ಅಬೂಲುಅ್‌ಲುಅನಿಗೆ ಮದೀನಕ್ಕೆ ಬರಲು ಹಝ್‌ರತ್ ಉಮರ್(ರ) ಅನುಮತಿ ಕೊಟ್ಟರು. ಅವನೊಬ್ಬ ನಿಪುಣ ಕಮ್ಮಾರ, ಶಿಲ್ಪಿ ಮತ್ತು ಬಡಗಿಯಾಗಿದ್ದನು. ಹಝ್‌ರತ್ ಮುಗ್ಯೆರ(ರ) ಅವನ ಮೇಲೆ ಮಾಸಿಕ ನೂರು ದಿರ್ಹಂ ಟ್ಯಾಕ್ಸ್ ನಿಶ್ಚಯಿಸಿದ್ದಾರೆ ಎಂದು ಅವನು ದೂರುಕೊಟ್ಟಾಗ, ಅದು ಅವನಿಗೆ ಕೆಲಸದಲ್ಲಿ ಇರುವ ನೈಪುಣ್ಯದ ಪ್ರಕಾರ ಸರಿಯೇ ಆಗಿದೆ ಎಂದು ಹಝ್‌ರತ್ ಉಮರ್(ರ) ಹೇಳಿದರು. ಇದರಿಂದ ಅವನು ಕೋಪಗೊಂಡಿದ್ದನು. ಒಂದು ದಿನ ಹಝ್‌ರತ್ ಉಮರ್(ರ) ಅವನೊಡನೆ ಗಾಳಿಯಿಂದ ನಿಯಂತ್ರಿಸಲ್ಪಡುವ ಬೀಸುಕಲ್ಲಿನ ಬಗ್ಗೆ ಕೇಳಿದಾಗ ಆ ಗುಲಾಮನು ಕೋಪದಿಂದ ಮತ್ತು ಅನಿಷ್ಟತೆಯಿಂದ ಹಝ್‌ರತ್ ಉಮರ್(ರ)ರಿಗೆ ಬೆದರಿಕೆ ಹಾಕುತ್ತಾ ಹೇಳಿದನು: ಜನರು ಸದಾ ಅದರ ಬಗ್ಗೆ ಚರ್ಚಿಸುವಂತಹ ಬೀಸುಗಲ್ಲನ್ನು ನಾನು ನಿಮಗಾಗಿ ತಯಾರುಮಾಡುವೆನು. ಅವನು ಹಝ್‌ರತ್ ಉಮರ್(ರ)ರನ್ನು ಶಹೀದ್ ಮಾಡುವ ದೃಢನಿರ್ಧಾರ ಮಾಡಿಕೊಂಡು ಮಧ್ಯದಲ್ಲಿ ಹಿಡಿಯಿರುವ ಇರುಭಾಗಗಳು ಚೂಪಾದ ಕತ್ತಿಯನ್ನು ತಯಾರಿಸಿ ಅದನ್ನು ವಿಷಪೂರಿತಗೊಳಿಸಿ ಅದನ್ನು ಇರಾನಿನ ಸೇನಾಧಿಪತಿಯಾಗಿದ್ದ ಹುರ್ಮಝಾನಿಗೆ ತೋರಿಸಿದನು. ಇದರಿಂದ ಯಾರ ಮೇಲೆ ಹಲ್ಲೆ ನಡೆಸಿದರೂ ಅವನು ಸತ್ತುಬಿಡುವನು ಎಂದು ಹುರ್ಮಝಾನ್ ಅಭಿಪ್ರಾಯಪಟ್ಟನು. ಕೆಲವು ಚರಿತ್ರೆಗಾರರು ಈರೀತಿ ಸಹ ಅಭಿಪ್ರಾಯಪಟ್ಟಿದ್ದಾರೆ: ಹುರ್ಮಝಾನನ್ನು ಮುಸ್ಲಿಮರು ತುಸ್ತರ್ ಎಂಬ ಪ್ರದೇಶದಲ್ಲಿ ಕೈದಿ ಮಾಡಿ ಮದೀನಕ್ಕೆ ಕಳುಹಿಸಿದ್ದರು. ಕೊಲ್ಲಲ್ಪಡುವ ಭಯದಿಂದ ಹುರ್ಮಝಾನ್ ಮುಸ್ಲಿಮನಾಗಿದ್ದನು.

ತಬ್ಕಾತ್ ಇಬ್ನು ಸಅದ್‌ನಲ್ಲಿರುವ ನಾಫಿಅ್‌ರ ವರದಿ ಪ್ರಕಾರ ಹಝ್‌ರತ್ ಉಮರ್(ರ)ರನ್ನು ಶಹೀದ್ ಮಾಡಲಾದ ಚೂರಿಯನ್ನು ಹುರ್ಮಝಾನ್ ಮತ್ತು ಜುಫೈನನ ಬಳಿ ಇದ್ದದ್ದಾಗಿ ಹಝ್‌ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ನೋಡಿದ್ದರು. ಆದರೆ ತಬರಿಯಲ್ಲಿ ಪ್ರಸ್ತಾಪಿಸಲಾಗಿರುವ ಮುಸಯ್ಯಬ್‌ರ ವರದಿ ಪ್ರಕಾರ ಅಬೂಲುಅ್‌ಲುಅ, ಜುಫೈನ ಮತ್ತು ಹುರ್ಮಝಾನ್ ನಡುವೆ

ಬಿದ್ದಿದ್ದ ಚೂರಿಯನ್ನು ಅಬ್ದುರ್ರಹ್ಮಾನ್ ಬಿನ್ ಅಬೂಬಕರ್(ರ) ನೋಡಿದ್ದರು. ಹಝ್ರತ್ ಉಬೈದುಲ್ಲಾಹ್ ಬಿನ್ ಉಮರ್‌ರಿಗೆ ಇದರ ಬಗ್ಗೆ ಗೊತ್ತಾದಾಗ, ಅವರು ತನ್ನ ಖಡ್ಗದಿಂದ ಇಬ್ಬರನ್ನೂ ಕೊಂದು ಹಾಕಿದರು. ಇನ್ನೊಂದೆಡೆ ಹೀಗೆ ವರದಿಯಾಗಿದೆ: ಹುರ್ಮುಝಾನಿನ ಮೇಲೆ ಹಝ್ರತ್ ಉಬೈದುಲ್ಲಾಹ್ ಬಿನ್ ಉಮರ್(ರ) ಖಡ್ಗದಿಂದ ಹಲ್ಲೆ ನಡೆಸಿದಾಗ ಅವನು **ಲಾ ಇಲಾಹ ಇಲ್ಲಲ್ಲಾಹ್** ಎಂದು ಉಚ್ಚರಿಸಿದನು. ಜುಫೈನನ ಮೇಲೆ ಖಡ್ಗ ಚಲಾಯಿಸಿದಾಗ ಅವನು ತನ್ನ ಕಣ್ಣುಗಳ ಮುಂದೆ ಶಿಲುಬೆಯ ರೂಪದಲ್ಲಿ ಸಂಕೇತ ಮಾಡಿದನು. ಅನಂತರ ಹಝ್ರತ್ ಉಬೈದುಲ್ಲಾಹ್ ಅಬೂಲುಅ್‌ಲುಅನ ಮಗಳನ್ನೂ ಕೊಂದುಹಾಕಿದರು.

ಅದೇ ರೀತಿಯಲ್ಲಿ ಮತ್ತೋರ್ವ ಚರಿತ್ರೆಗಾರನಾದ ಡಾಕ್ಟರ್ ಮುಹಮ್ಮದ್ ಹುಸೈನ್ ಹೈಕಲ್ ತನ್ನ ಪುಸ್ತಕದಲ್ಲಿ ಬರೆಯುತ್ತಾರೆ: "ಇರಾನಿ ಯಹೂದಿಯರಿಗೆ ಮತ್ತು ಕ್ರೈಸ್ತರಿಗೆ ಮುಸ್ಲಿಮರಿಂದ ಉಂಟಾದ ಹೀನಾಯ ಸೋಲಿನ ಕಾರಣದಿಂದ ಅವರು ಅರೇಬಿಯರ ವಿರುದ್ಧ ಸಾಮಾನ್ಯವಾಗಿ ಹಾಗೂ ಹಝ್ರತ್ ಉಮರ್(ರ)ರ ವಿರುದ್ಧ ವಿಶೇಷವಾಗಿ ತಮ್ಮ ಹೃದಯಗಳಲ್ಲಿ ಹಗೆ ಮತ್ತು ದ್ವೇಷದ ಭಾವನೆಗಳನ್ನು ಅಡಗಿಸಿಟ್ಟಿದ್ದರು. ಅಬೂಲುಅ್‌ಲುಅನ ಕೃತ್ಯವು ಮದೀನದಲ್ಲಿ ಇದ್ದ ಅಧರ್ಮಿಗಳಾದ ಈ ಸಣ್ಣ ಸಂಘದ ಕೋಪ ಮತ್ತು ಪ್ರತೀಕಾರದಿಂದ ತುಂಬಿದ ಸಂಚಿನ ಪರಿಣಾಮವಾಗಿರಬಹುದು. ಅಬೂಲುಅ್‌ಲುಅ ಆತ್ಮಹತ್ಯೆ ಮಾಡಿರದಿದ್ದರೆ ಈ ಒಳಸಂಚನ್ನು ಬಯಲು ಮಾಡಿ ಅದರ ನಿಜಸ್ಥಿತಿಯ ತನಕ ಹಝ್ರತ್ ಉಮರ್(ರ)ರ ಮಕ್ಕಳಿಗೆ ತಲುಪಬಹುದಾಗಿತ್ತು. ಹೇಗಿದ್ದರೂ ಅಲ್ಲಾಹನ ವಿಧಿಯು ಈ ಒಳಸಂಚಿನ ರಹಸ್ಯವು ಬಯಲುಗೊಳ್ಳುವಂತೆ ಮಾಡಿತು. ಅದು ಹೇಗೆಂದರೆ, ಹಝ್ರತ್ ಉಮರ್(ರ)ರನ್ನು ಶಹೀದ್ ಮಾಡಲಾದ ಚೂರಿ ಹುರ್ಮುಝಾನ್ ಮತ್ತು ಜುಫೈನನ ಬಳಿಯಲ್ಲಿ ಇತ್ತು ಎಂದು ಮುಸ್ಲಿಮರಲ್ಲಿ ಅತ್ಯಂತ ವಿಶ್ವಾಸಯೋಗ್ಯವಾದ ಸಾಕ್ಷ್ಯಗಳನ್ನು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಮತ್ತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಅಬೂಬಕ್ರ್(ರ) ನೀಡಿದ್ದರು. ಇದರ ನಂತರ ಸಂಶಯಕ್ಕೆ ಯಾವುದೇ ಎಡೆಯಿಲ್ಲ. ಹಝ್ರತ್ ಉಮರ್(ರ) ಈ ಸಂಚಿಗೆ ಬಲಿಯಾದರು."

ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್(ರ) ಮಾಡಿದ ಕೃತ್ಯಕ್ಕೆ ನಿಯಮಪರವಾಗಿ ಅನುಮತಿಯಿರಲಿಲ್ಲ. ಪ್ರತೀಕಾರ ಮಾಡಲು ಸ್ವತಃ ತಯಾರಾಗಲು ಮತ್ತು ತನ್ನ ಹಕ್ಕನ್ನು ಸ್ವತಃ ಪಡೆಯಲು ಯಾವನೇ ವ್ಯಕ್ತಿಗೆ ಅಧಿಕಾರವಿರಲಿಲ್ಲ. ವಿಷಯಗಳ ಬಗ್ಗೆ ಜನರ ನಡುವೆ ನ್ಯಾಯಯುತವಾಗಿ ತೀರ್ಮಾನ ಮಾಡಲು ಮತ್ತು ಅಪರಾಧಿ ವಿರುದ್ಧ ಪ್ರತಿಕ್ರಿಯಾ ದಂಡದ ಆದೇಶವನ್ನು ಹೊರಡಿಸಲು ಹಝ್ರತ್ ಪೈಗಂಬರ್(ಸ)ರಿಗೆ ಮತ್ತು ಅವರ ನಂತರ ಅವರ ಖಲೀಫರಿಗೆ ಮಾತ್ರ ಅಧಿಕಾರವಿರುತ್ತದೆ. ಅಂತೂ ಈ ಕೊಲೆಯು ಒಂದು ಯೋಜಿತ ಸಂಚಾಗಿರಬಹುದು ಎಂದು ಊಹಿಸಬಹುದಾಗಿದೆ. ಇದರ ಕುರಿತು ಕೆಲವು ಚರಿತ್ರೆಗಾರರ ಪುರಾವೆಗಳು ಪ್ರಬಲವಾಗಿವೆ. ಏಕೆಂದರೆ ಹಝ್ರತ್ ಉಸ್ಮಾನ್(ರ) ಸಹ ಇದೇ ರೀತಿಯ ಒಳಸಂಚಿಗೆ ತುತ್ತಾದರು. ಇದರಿಂದ ಆ ಸಂಶಯವೂ ಪ್ರಬಲವಾಗುತ್ತದೆ. ಇಸ್ಲಾಮಿನ ವರ್ಧಿಸುತ್ತಿರುವ ಪ್ರಗತಿ ಮತ್ತು ವಿಜಯವನ್ನು ತಡೆಯಲು ಹಾಗೂ ತಮ್ಮ ಪ್ರತೀಕಾರದ ಬೆಂಕಿಯನ್ನು ನಂದಿಸಲು ಬಾಹ್ಯ ಶಕ್ತಿಗಳ ಒಂದು ಒಳಸಂಚಿನ ನೆರವಿನಿಂದ ಹಝ್ರತ್ ಉಮರ್‌ರನ್ನು ಶಹೀದ್ ಮಾಡಲಾಗಿತ್ತು ಎಂದು ಶಕ್ತವಾಗಿ ಸಂಶಯಿಸಬಹುದಾಗಿದೆ.

**ವಲಯುಬದ್ದಿಲನ್ನಹುಂ ಮಿನ್‌ಬಅ್‌ದಿ ಖೌಫಿಹಿಂ ಅಮ್‌ನಾ** ಎಂಬ ಆಯತ್ತನ್ನು ವ್ಯಾಖ್ಯಾನಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಭಯಗೊಳ್ಳುವಂತಹ ಯಾವುದೇ ವಿಪತ್ತು ಖಲೀಫರಿಗೆ ಬಂದಿಲ್ಲ. ಹಾಗೇನಾದರೂ ಬಂದರೂ ಕೂಡ ಅಲ್ಲಾಹನು ಅದನ್ನು ನೆಮ್ಮದಿಯಾಗಿ ಬದಲಾಯಿಸುತ್ತಾನೆ. 'ಹೇ ಅಲ್ಲಾಹ್, ನನಗೆ ಮದೀನದಲ್ಲಿ ಶಹಾದತ್ ನೀಡು' ಎಂದು ಹಝ್ರತ್ ಉಮರ್(ರ) ನಿರಂತರವಾಗಿ ದುಆ ಮಾಡುತ್ತಿದ್ದರು. ಅವರಿಗೆ ಭಯದ ಸ್ಥಿತಿಯುಂಟಾಗಿತ್ತು ಮತ್ತು ಅಲ್ಲಾಹನು ಅದನ್ನು ನೆಮ್ಮದಿಗೆ ಬದಲಾಯಿಸಿಲ್ಲವೆಂದು ಅವರ ಶಹಾದತಿನ ಕುರಿತು ಹೇಗೆ ಹೇಳಲು ಸಾಧ್ಯ? ಅಲ್ಲಾಹನು ಹಝ್ರತ್ ಉಮರ್(ರ)ರ ದುಆವನ್ನು ಅಂಗೀಕರಿಸಿದನು. ಇಸ್ಲಾಮಿನ ಗೌರವ ಉಳಿಯುವ ರೀತಿಯಲ್ಲಿ ಅದರ ಏರ್ಪಾಡನ್ನು ಮಾಡಿದನು. ಮದೀನದ ಮೇಲೆ ಯಾವುದೇ ಹೊರಗಿನ ಸೈನ್ಯ ಆಕ್ರಮಣ ಮಾಡುವಂತೆ ಆಗುವ ಬದಲಾಗಿ ಒಳಗಿನಿಂದಲೇ ಒಬ್ಬ ದುಷ್ಟನು ಎದ್ದನು ಮತ್ತು ಅವನು ಕಠಾರಿಯಿಂದ ಹಝ್ರತ್ ಉಮರ್(ರ)ರನ್ನು ಶಹೀದ್ ಮಾಡಿದನು.

ಗುಲಾಮರನ್ನು ಮುಕ್ತಿಗೊಳಿಸುವುದರ ಕುರಿತು ಇಸ್ಲಾಮಿನ ಪಾಠಗಳನ್ನು ವಿವರಿಸುತ್ತಾ ಹಝ್ರತ್ ಉಮರ್(ರ)ರ ಶಹಾದತಿನ ಕಾರಣವನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಈ ರೀತಿ ವಿವರಿಸುತ್ತಾರೆ: ಗುಲಾಮರನ್ನು ಯಾವುದೇ ಕಂದಾಯ ವಸೂಲು ಮಾಡದೇ ಸ್ವತಂತ್ರಗೊಳಿಸಲು ಆದೇಶವಿತ್ತು. ಹಾಗೆ ಬಿಡುಗಡೆಗೊಳಿಸಲು ಸಾಧ್ಯವಿಲ್ಲದಿದ್ದರೆ ಮತ್ತು ಗುಲಾಮನಿಗೂ ತೆರಿಗೆ ಪಾವತಿಸಲು ಶಕ್ತಿಯಿಲ್ಲದಿದ್ದರೆ ಅವನು ತನ್ನ ತೆರಿಗೆ ಪಾವತಿಗಾಗಿ ಕಂತುಗಳನ್ನು ನಿಶ್ಚಯಿಸಬಹುದಾಗಿದೆ. ಹೀಗೆ ಕಂತುಗಳು ನಿಶ್ಚಿತಗೊಂಡ ಒಬ್ಬ ಗುಲಾಮನೇ ಹಝ್ರತ್ ಉಮರ್‌ರನ್ನು ಶಹೀದ್ ಮಾಡಿದನು. ಒಬ್ಬ ಗುಲಾಮನು ಬಹಳ ಸಂಪಾದಿಸುತ್ತಿದ್ದನು, ಆದರೆ ಅವನ ಮಾಲಿಕನಿಗೆ ಅಲ್ಪವೇ ನೀಡುತ್ತಿದ್ದನು. ಮೂರುವರೆ ಆಣೆ ಮಾಲಿಕನಿಗೆ ಪಾವತಿಸಬೇಕೆಂದು ಆ ಗುಲಾಮನೊಡನೆ ಹಝ್ರತ್ ಉಮರ್(ರ) ಹೇಳಿದರು. ಇರಾನಿಯಾದ ಕಾರಣದಿಂದ ಇದು ತನ್ನ ವಿರುದ್ಧ ಮಾಡಲಾದ ತೀರ್ಪಾಗಿದೆ ಎಂದು ಅವನು ಭಾವಿಸಿದನು. ಕೋಪದಿಂದ ಮರುದಿನವೇ ಚೂರಿಯಿಂದ ಹಝ್ರತ್ ಉಮರ್(ರ)ರ ಮೇಲೆ ಹಲ್ಲೆ ನಡೆಸಿದನು. ಅದರಿಂದ ಆದ ಗಾಯಗಳ ಕಾರಣದಿಂದ ಹಝ್ರತ್ ಉಮರ್(ರ) ಶಹೀದ್ ಆದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ವೇದನಾಜನಕ ಘಟನೆಯನ್ನು ಪ್ರಸ್ತಾಪಿಸುತ್ತಾ ಹೇಳುತ್ತಾರೆ: ಇದರ ಪ್ರಭಾವ ಇಸ್ಲಾಮಿನ ಮೇಲೆ ಈಗಲೂ ಇದೆ. ಅದು ಹೇಗೆಂದರೆ, ಮರಣ ಯಾವಾಗಲೂ ಮನುಷ್ಯನ ಜೊತೆಗೆ ಇರುತ್ತದೆ. ಆದರೆ ದೇಹಶಕ್ತಿ

ಉತ್ತಮವಾಗಿರುವಾಗ ಮರಣದ ಚಿಂತೆಯಿರುವುದಿಲ್ಲ. ಆದರೆ ತೋಳುಗಳು ಬಲಹೀನವಾಗುವಾಗ ಮತ್ತು ಆರೋಗ್ಯ ಇಳಿಮುಖವಾಗುವಾಗ ಮನುಷ್ಯನ ಮಿದುಳು ಸ್ವತಃ ಮುಂದಿನ ಏರ್ಪಾಡಿನ ಕುರಿತು ಯೋಚಿಸಲು ಶುರುಮಾಡುತ್ತದೆ. ಮನುಷ್ಯನು ಮತ್ತೊಬ್ಬರೊಡನೆ ಈ ಕುರಿತು ಮಾತನಾಡುವುದಿಲ್ಲ. ಆದರೆ ಸ್ವತಃ ಮುಂದಿನ ಏರ್ಪಾಡಿನ ಕುರಿತು ಯೋಚಿಸಲು ಅವನಿಗೆ ಒಲವು ಇರುತ್ತದೆ. ಈ ಕಾರಣದಿಂದ ನೇತಾರನು ಮೃತಪಡುವಾಗ ಜನರು ಜಾಗರೂಕರಾಗುತ್ತಾರೆ. ಹಝ಼್ರತ್ ಉಮರ್(ರ)ರಿಗೆ 63 ವಯಸ್ಸಾಗಿದ್ದರೂ ಅವರು ದೇಹಬಲವನ್ನು ಹೊಂದಿದ್ದರು. ಹಝ಼್ರತ್ ಉಮರ್(ರ) ಸಹಾಬರಿಂದ ಬೇಗನೇ ಬೇರ್ಪಡುವವರು ಎಂದು ಸಹಾಬರು ಯೋಚಿಸಿರಲಿಲ್ಲ. ಆದ್ದರಿಂದ ಮುಂದಿನ ಏರ್ಪಾಡಿನ ಕುರಿತು ಅವರು ಚಿಂತಿಸಿಯೇ ಇರಲಿಲ್ಲ. ಅಚಾನಕ್ಕಾಗಿ ಹಝ಼್ರತ್ ಉಮರ್(ರ)ರ ಮರಣದ ವಿಪತ್ತು ಬಂತು. ಆ ಸಮಯದಲ್ಲಿ ಮುಸ್ಲಿಮರ ಜಮಾಅತ್ ಬೇರೆ ಯಾರನ್ನೂ ಇಮಾಮನ್ನಾಗಿ ಸ್ವೀಕರಿಸಲು ತಯಾರಾಗಿರಲಿಲ್ಲ. ಮಾನಸಿಕವಾಗಿ ತಯಾರಾಗಿರದ ಕಾರಣದಿಂದ ಇರಬೇಕಾದಷ್ಟು ಬಾಂಧವ್ಯ ಮತ್ತು ಪ್ರೀತಿ ಜನರಿಗೆ ಹಝ಼್ರತ್ ಉಸ್ಮಾನ್(ರ)ರೊಂದಿಗೆ ಉಂಟಾಗಲಿಲ್ಲ. ಇದರ ಕಾರಣದಿಂದ ಇಸ್ಲಾಮಿನ ಸ್ಥಿತಿ ಬಹಳ ದುರ್ಬಲವಾಯಿತು. ಹಝ಼್ರತ್ ಅಲಿಯವರ ಕಾಲದಲ್ಲಿ ಇನ್ನೂ ಹೆಚ್ಚು ದುರ್ಬಲಗೊಂಡಿತು. ನಂತರ ಉಂಟಾದ ಕಲಹಕ್ಕೆ ಒಂದು ಕಾರಣ ಇದೂ ಆಗಿರಬಹುದು ಎಂದು ಹಝ಼್ರತ್ ಮುಸ್ಲಿಹ್ ಮೌಊದ್(ರ) ಅಭಿಪ್ರಾಯಪಡುತ್ತಾರೆ.

ನಮಾಝಿನ ಸಂದರ್ಭದಲ್ಲಿ ಕೆಲವು ವ್ಯಕ್ತಿಗಳನ್ನು ಸಂರಕ್ಷಣೆಗಾಗಿ ನಿಶ್ಚಯಿಸುವುದಕ್ಕೆ ಸಂಬಂಧಿಸಿಯೂ ಹಝ಼್ರತ್ ಉಮರ್(ರ)ರ ಶಹಾದತಿನ ಘಟನೆಯನ್ನು ಉದಾಹರಿಸುತ್ತಾ ಹಝ಼್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ಼್ರತ್ ಉಮರ್(ರ)ರೊಂದಿಗೆ ಮುಸ್ಲಿಮರು ಸಹ ನಮಾಝಿನಲ್ಲಿ ನಿರತರಾಗಿದ್ದಾಗ ಒಬ್ಬ ದುಷ್ಟನು ಮುಂದೆ ಬಂದು ಕಠಾರಿಯಿಂದ ಆಕ್ರಮಿಸಿದನು. ಮುಸ್ಲಿಮರಲ್ಲಿ ಅರ್ಧದಷ್ಟು ಜನರು ಸುರಕ್ಷತೆಗಾಗಿ ನಿಲ್ಲಬೇಕೆಂದು ಪವಿತ್ರ ಖುರ್‌ಆನ್‌ನಲ್ಲಿ ಸ್ಪಷ್ಟವಾದ ಆದೇಶವಿದೆ. ಇದು ಯುದ್ಧದ ಸಮಯಕ್ಕಿರುವ ಸಂಗತಿಯಾಗಿದ್ದರೂ ಸಣ್ಣ ಫಿತ್ನಗಳನ್ನು ತಡೆಯಲಿಕ್ಕೂ ಕೆಲವು ಮಂದಿಯಾದರೂ ನಮಾಝಿನ ವೇಳೆ ಕಾವಲು ನಿಂತರೆ ಅದು ಆಕ್ಷೇಪಣೀಯ ಸಂಗತಿಯಲ್ಲವೆಂದು ಈ ಆದೇಶದಿಂದ ರುಜುವಾತು ಲಭಿಸುತ್ತದೆ. ಈ ಘಟನೆಯ ನಂತರ ಸಹಾಬರು ಅದರ ಏರ್ಪಾಡು ಮಾಡಿದರು. ನಮಾಝ್ ನಿರ್ವಹಿಸಲಾಗುವಾಗ ಯಾವಾಗಲೂ ಸಂರಕ್ಷಣೆಗಾಗಿ ಕಾವಲಿನ ಏರ್ಪಾಡು ಮಾಡುತ್ತಿದ್ದರು.

ನಿರ್ಗತಿಕರ ಮತ್ತು ಬಡವರಿಗಾಗಿ ಖರ್ಚು ಮಾಡಿದ ಕಾರಣದಿಂದ ಮರಣದ ವೇಳೆ ಹಝ಼್ರತ್ ಉಮರ್(ರ)ರಿಗೆ 86 ಸಾವಿರ ದಿರ್ಹಮಿನ ಸಾಲವಿತ್ತು. ವಫಾಉಲ್ ವಫಾ ಗ್ರಂಥದಲ್ಲಿ ಹಝ಼್ರತ್ ಇಬ್ನು ಉಮರ್‌ರಿಂದ ಹೀಗೆ ವರದಿಯಾಗಿದೆ: ಸಾಲಗಳನ್ನು ತೀರಿಸಲು ತನ್ನ ಮನೆಯನ್ನು ಮಾರಾಟ ಮಾಡುವಂತೆ ಹಾಗೂ ಬನೂಅದ್ದಿ ಮತ್ತು ಖುರೈಶಿಗಳೊಡನೆ ಅಲ್ಲದೇ ಬೇರೆ ಯಾರಿಂದಲೂ ಈ ಸಂಬಂಧವಾಗಿ ಸಹಾಯ ಪಡೆಯದಿರಲು ಹಝ಼್ರತ್ ಅಬ್ದುಲ್ಲಾಹ್(ರ) ಮತ್ತು ಹಝ಼್ರತ್ ಹಫ್ಸ(ರ)ರೊಡನೆ ಹಝ಼್ರತ್ ಉಮರ್(ರ) ಆದೇಶಿಸಿದರು. ಹಝ಼್ರತ್ ಮುಆವಿಯರಿಗೆ(ರ) ಆ ಮನೆಯನ್ನು ಮಾರಾಟ ಮಾಡಿ ಅಬ್ದುಲ್ಲಾಹ್ ಬಿನ್ ಉಮರ್(ರ) ಸಾಲವನ್ನು ತೀರಿಸಿದರು. ಆ ಮನೆಯನ್ನು **ದಾರುಲ್‌ಖಝಾಇ ದೈನಿ ಉಮರ್** ಎಂದು ಕರೆಯಲಾಯಿತು. ಎಂದರೆ, ಹಝ಼್ರತ್ ಉಮರ್(ರ)ರ ಸಾಲವನ್ನು ತೀರಿಸಲು ಮಾರಾಟ ಮಾಡಲಾದ ಮನೆ. ಇವರ ಪ್ರಸ್ತಾಪ ಮುಂದುವರೆಯುವುದು ಇನ್‌ಶಾ ಅಲ್ಲಾಹ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

*At, Masjid Mubarak, Islamabad, Tilford, UK, On 15-10-2021*

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon